MYSORE LEGISLATIVE ASSEMBLY.

NINETY-EIGTH DAY.

Thursday, 2nd January 1964

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Officers in the Veterinary and Animal Husbandry Departments deputed to the Mysore State from South Kanara, after integration.

* *Q.*— 1004. Sri C. V. VENKATARAYAPPA (Chickballapur).—

Will the Government be pleased to state:—

(*a*) the number of officers in the Veterinary and Animal Husbandry Departments who were deputed to the Mysore State from South Kanara after integration;

(*b*) out of them, the number of officers sent to foreign countries for studies and the number of officers deputed for training in India?

A.— Sri M. V. KRISHNAPPA (Minister for Revenue).—

(*a*) 31.

(*b*) Foreign Countries	..	8
In India	...	11

ಶ್ರೀ ಸಿ. ವಿ. ವೆಂಕಟರಾಯಪ್ಪ.—ಸೌತ್ ಕೆನರಾದವರು ಬಿಟ್ಟು ಮೈಸೂರು ಸಂಸ್ಥಾನದ ಉಳಿದ ಭಾಗದವರು ಎಷ್ಟು ಜನ ಫಾರಿನ್ ಕಂಟ್ರೀಸ್‌ಗೆ ಡೆಪ್ಯೂಟಿ ಆಗಿದ್ದಾರೆ?

†ಶ್ರೀ ಎಂ. ವಿ. ಕೃಷ್ಣಪ್ಪ.—ಸಂಸ್ಥಾನದ ಎಲ್ಲಾ ಭಾಗಗಳೂ ಸೇರಿಕೊಂಡು ಒಟ್ಟು 40 ಜನರನ್ನು ಫಾರಿನ್ ಕಂಟ್ರೀಸ್‌ಗೆ ಕಳುಹಿಸಿದ್ದೇವೆ, 80 ಜನರನ್ನು ಇಂಡಿಯಾದೇಶದಲ್ಲೇ ಹೈಯರ್ ಪೋಸ್ಟ್ ಗ್ರ್ಯಾಜುಯೇಟ್ ಕೋರ್ಸ್ ಟ್ರೈನಿಂಗ್‌ಗೆ ಕಳುಹಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೌತ್ ಕೆನರಾ ಜಿಲ್ಲೆ ಕೂರ್ಗ್‌ಗೆ ಇಲ್ಲಿ ಪ್ರಿಫರೆನ್ಸ್ ಕೊಟ್ಟಿದ್ದೀರಿ, ಇವರನ್ನು ಸೆಲೆಕ್ಟ್ ಮಾಡುವಾಗ ಯಾವ ತತ್ವ ಅನುಸರಿಸಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ವೆಟರ್‌ನರಿ ಟ್ರೈನಿಂಗ್ ಕೋರ್ಸ್ ಸೆಲೆಕ್ಟ್ ಮಾಡುವಾಗ ಯಾರ್ಯಾರ ಯಾವ ಯಾವ ಸಬ್‌ಜೆಕ್ಟ್‌ನಲ್ಲಿ ಟ್ರೈನ್ಡ್ ಆಗಿರುತ್ತಾರೋ ಅವರನ್ನು ಆ ಸಬ್‌ಜೆಕ್ಟ್‌ನಲ್ಲಿ ಹೆಚ್ಚಿನ ಟ್ರೈನಿಂಗ್ ಪಡೆಯಲು ಸೆಲೆಕ್ಟ್ ಮಾಡುತ್ತಾರೆ, ಇದರಲ್ಲಿ ಸೌತ್ ಕನರಾದವರೇ ಹೆಚ್ಚಾಗಿ

†Indicates that the remarks or speeches have not been revised by the member concerned.

(ಶ್ರೀ ಎಂ. ವಿ. ಕೃಷ್ಣಪ್ಪ)

ಓದಿರಬಹುದು. ಅನಿವರ್ ಹಸ್ಬೆಂಡರಿ, ಡೈರೀಯಿಂಗ್ ಇವೆಲ್ಲಾ ಬರುತ್ತವೆ. ಯಾವ ತತ್ವದ ಮೇಲೆ ಮಾಡುತ್ತಾರೆ ಎಂದರೆ ಅದಕ್ಕೆ ಒಂದು ಟೆಕ್ನಿಕಲ್ ಕಮಿಟಿ ಇದೆ ಅದರಲ್ಲಿ ಟೆಕ್ನಿಕಲ್ ಪರ್ಸನ್ ಇರುತ್ತಾರೆ—ಡೈರೆಕ್ಟರ್ ಆಫ್ ಅನಿಮಲ್ ಹಸ್ಬೆಂಡ್ರಿ, ಸೆಕ್ರೆಟರಿ ಆಫ್ ದಿ ಕನ್ಸರ್ನ್ಡ್ ಮಿನಿಸ್ಟ್ರಿ, ಟೆಕ್ನಿಕಲ್ ಪರ್ಸನ್ ಡೈರೆಕ್ಟರ್ ಮತ್ತು ಮಾವ ಪ್ರದೇಶದ ಹೋಗುತ್ತಾರೋ ಆದೇಶದ ಒಬ್ಬ ಎಕ್ಸ್‌ಪರ್ಟ್ ಈ 4 ಜನರೂ ಆ ಕಮಿಟಿಯಲ್ಲಿ ಇರುತ್ತಾರೆ ಮತ್ತು ಅವರು ಇವರನ್ನು ಸೆಲೆಕ್ಟ್ ಮಾಡುತ್ತಾರೆ.

ಶ್ರೀ ಸಿ. ಆರ್. ರಂಗೇ ಗೌಡ —ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಲ್ಲಿರುವವರು ಕೆಲವರನ್ನು ಫಾರಿನ್‌ಗೆ ಕಳುಹಿಸಿ ಅವರು ಅಲ್ಲಿಂದ ವಾಪಸು ಬಂದಮೇಲೆ ಅವರು ಯಾವ ಸಬ್‌ಜಕ್ಟ್‌ನಲ್ಲಿ ತರಬೇತು ಪಡೆದು ಬಂದಿರುತ್ತಾರೋ ಆ ಸಬ್ಜೆಕ್ಟ್‌ನ್ನು ಕೊಡದೇ ಬೇರೆ ಸಬ್ಜಕ್ಟ್‌ಗೆ ಪೋಸ್ಟ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ ಕೃಷ್ಣಪ್ಪ —ಈಗ ನಮ್ಮ ಮುಂದೆ ಇರುವ ಪ್ರಶ್ನೆ ಇಂಟರ್ ಸ್ಟೇಟ್ ಯೂನಿವರ್ಸಿಟಿಗೆ ಒಂದು ಪ್ರೋಗ್ರಾಂ ಹಾಕಿಕೊಂಡು ಮೈಸೂರ್ ಸ್ಟೇಟ್‌ನಲ್ಲಿ ರೂರಲ್ ಯೂನಿವರ್ಸಿಟಿ ಅಂತ ಹೇಳಿ ಒಂದು ಯೂನಿವರ್ಸಿಟಿ ಆಗುವುದು ಇದೆ. ರೂರಲ್ ಯೂನಿವರ್ಸಿಟಿ ಆದಾಗ ಆ ಕಾಲೆಜಿಗೆ ಬೇಕಾಗುವ ಟ್ರೈನಿಂಗ್ ಸ್ಟಾಫ್ ಏನು ಅದಕ್ಕೆ ಟ್ರೈನಿಂಗ್‌ಗೋಸ್ಕರ ಅಮೆರಿಕಕ್ಕೆ ಹೋಗಿದ್ದಾರೆ, ಅವರು ವಾಪಸು ಬಂದ ಮೇಲೆ ಆ ಸಬ್ಜೆಕ್ಟ್‌ನಲ್ಲೆ ಅವರಿಗೆ ಕೆಲಸ ಕೊಡುತ್ತಾರೆ. ಹಿಂದೆ ತಾವು ಹೇಳಿರುವಂತೆ ನಡೆದಿರುವ ಕೆಲವು ಸಂದರ್ಭಗಳಲ್ಲಿ ಅವರು ಯಾವ ಸಬ್ಜೆಕ್ಟ್‌ನಲ್ಲಿ ಟ್ರೈನಿಂಗ್ ತೆಗೆದುಕೊಂಡಿದ್ದಾರೆ ಆ ಸಬ್ಜೆಕ್ಟ್ ಅದೇ ಡಿಪಾರ್ಟ್‌ಮೆಂಟ್‌ನಲ್ಲಿ ಸಿಕ್ಕಿಲ್ಲ, ಏಕೆಂದರೆ ಡೈರೀಯಿಂಗ್‌ನಲ್ಲಿ 4 5 ಜನ ಎಕ್ಸ್‌ಪರ್ಟ್ ಇರುತ್ತಾರೆ ಅವರೆಲ್ಲರಿಗೂ ಅದೇ ಕೆಲಸ ಸಿಕ್ಕುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ —ವಿದೇಶಗಳಲ್ಲಿ ಟ್ರೈನಿಂಗ್‌ಗೆ ಹೋಗಿರುವವರಲ್ಲಿ ಡೈರೀ ಫಾರ್ಮಿಂಗ್ ಸಲುವಾಗಿ ಹೋಗಿರುವವರು ಎಷ್ಟು ಜನ ?

ಶ್ರೀ ಎಂ ವಿ. ಕೃಷ್ಣಪ್ಪ.—ಆ ವಿವರ ಇಲ್ಲ, ಈಗ ನಮ್ಮ ಮುಂದೆ ಇರುವುದು ಇನ್‌ಸ್ಟಿಟೂಷನಲ್ ಅರೇಂಜ್‌ಮೆಂಟ್ ಪ್ರೋಗ್ರಾಂ ಅಂತ ಹೇಳಿ ರೂರಲ್ ಯೂನಿವರ್ಸಿಟಿ ಟೀಚಿಂಗ್ ಸ್ಟಾಫ್ ಟ್ರೈನಿಂಗ್ ಗೊಸ್ಕರ ಟೆನಸಿ ಯೂನಿವರ್ಸಿಟಿಗೆ ಹೋಗುತ್ತಾ ಇದ್ದಾರೆ.

ಶ್ರೀ ಸಿ. ಜೆ ವಿಶ್ವನಾಥ್.—ಇವರುಗಳ ಸೆಲೆಕ್ಷನ್ ಆದಮೇಲೆ ಆದು ಸರ್ಕಾರದ ಅಪ್ರೂವಲ್‌ಗೆ ಬರುತ್ತದೆ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ —ಹೌದು ಬಂದರೂ ಕೂಡ ನಾವೇನೂ ಮಾಡುವುದಕ್ಕಾಗುವುದಿಲ್ಲ, ಏಕೆಂದರೆ ಟೆಕ್ನಿಕಲ್ ಕಮಿಟಿ ಅವರು ಸೆಲೆಕ್ಟ್ ಮಾಡಿದ ಮೇಲೆ ಮಿನಿಸ್ಟರು ಏನೂ ಮಾಡುವುದಕ್ಕಾಗುವುದಿಲ್ಲ, ಮಿನಿಸ್ಟರು ಲೇಮ್ಯಾನ್, ಅವ ಟೆಕ್ನಿಕಲ್ ಸಬ್ಜೆಕ್ಟ್ ಆದ್ದರಿಂದ ಆ ಸಬ್ಜೆಕ್ಟ್‌ನಲ್ಲಿ ಯಾರ್ಯಾರು ಪರಿಣಿತರು, ಯಾರಿಗೆ ಅನುಭವ ಇದೆ ಎಂಬುದನ್ನು ಮಿನಿಸ್ಟರು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ, ನ ಮಾನವಾಗಿ ಅವರು ಹೇಳಿದ್ದನ್ನು ಒಪ್ಪಿಕೊಂಡುಬಿಡುತ್ತೇವೆ.

ಶ್ರೀ ಸಿ. ಆರ್. ರಂಗೇ ಗೌಡ.—ಕೆಲವು ಅಧಿಕಾರಿಗಳನ್ನು ಫಾರಿನ್‌ಗೆ ಕಳುಹಿಸಿ ಅವರ ಲೀನ್ ಚೇಂಜ್ ಮಾಡಿ ಅವರ ಸ್ಥಾನದಲ್ಲಿ ಬೇರೆಯವರನ್ನು ನೇಮಕ ಮಾಡಿ ಪುನಃ ಅವರು ಅಲ್ಲಿಂದ ವಾಪಸು ಬಂದ ಮೇಲೆ ಅವರಿಗೆ ಅಲ್ಲ ಅವಕಾಶ ಮಾಡಿಕೊಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಂದಿದೆ, ನ್ಯಾಯ ಕೂಡ ದೊರಕಿಸಿ ಕೊಟ್ಟಿದ್ದೇವೆ, ಅವರು ವಾಪಸು ಬಂದ ನಾಲ್ಕೈದು ತಿಂಗಳಿನಲ್ಲೇ ಅವರ ಹಿಂದಿನ ಜಾಗ ಕೊಡಿಸಿಕೊಟ್ಟಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ರೂರಲ್ ಯೂನಿವರ್ಸಿಟಿ ಸ್ಟಾಫ್ ಟ್ರೈನಿಂಗ್ ಡೈರೀ ಫಾರ್ಮಿಂಗ್‌ಗೆ ಮಾತ್ರವೇ ಅಥವಾ ಬೇರೆದಕ್ಕೂ ಬರುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗಾಗಲೇ ಅನೇಕರು ಟ್ರೈನಿಂಗ್ ತೆಗೆದುಕೊಂಡಿದ್ದಾರೆ ದೆಹಲಿಯಲ್ಲಿ ಇದ್ದಾರೆ, ಮೈಸೂರು ಸಂಸ್ಥಾನದಿಂದ 30—40 ಜನರನ್ನು ಕಳುಹಿಸಿದ್ದೇವೆ. ಅವರೆಲ್ಲರೂ ಡೈರಿ ಫಾರ್ಮಿಂಗ್‌ನಲ್ಲೇ ತರಬೇತನ್ನು ಪಡೆಯುತ್ತಾ ಇದ್ದಾರೆ.

ಶ್ರೀ ಇ. ನಾರಾಯಣಗೌಡ.—ಈ ಸೆಲೆಕ್ಷನ್‌ನ ವಿಚಾರದಲ್ಲಿ ಅನ್ಯಾಯವಾಗಿದೆಯೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡರೆ ಅದನ್ನು ಸರಿಪಡಿಸಲಿಕ್ಕೆ ಅವಕಾಶವಿದ್ದೀವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಸಾಧ್ಯವಾಗುವುದಿಲ್ಲ. ಅದರಲ್ಲಿ ವೆಟರಿನರಿ ಮತ್ತು ಅನಿಮಲ್ ಹಸ್ಬೆಂಡ್ರಿ ಇಲಾಖೆಯ ಡೈರೆಕ್ಟರವರೂ. ನಮ್ಮ ಸೆಕ್ರೆಟರಿಗಳೂ. ಮತ್ತು ಆ ಸಬ್ಜಕ್ಟಿಗೆ ಸಂಬಂಧಪಟ್ಟ ಪ್ರೊಫೆಸರರೂ ಇರುತ್ತಾರೆ. ನನಗೂ ಕೆಲವರು ಅನ್ಯಾಯವಾಗಿದೆ ಎಂತ ತಿಳಿಸಿದರು. ನಾನು ಅದನ್ನು ತರಿಸಿ ನೋಡಿದ್ದರಲ್ಲಿ ಅಂಥಾ ಅನ್ಯಾಯವೇನೂ ಆದಂತೆ ನನಗೆ ಕಂಡುಬರಲಿಲ್ಲ

ಶ್ರೀ ಸಿ. ವಿ. ವೆಂಕಟ್ರಾಯಪ್ಪ.—ಈ ಸೆಲೆಕ್ಷನ್ ಕಮಿಟಿ ಕಾನ್ಸ್ಟ್ಯೂಟ್ ಆದದ್ದು ಯಾವಾಗ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದೊಂದು ಖಾಯಂ ಆದ ಸಮಿತಿಯೇನಲ್ಲ. ಅಗತ್ಯಬಿದ್ದಾಗ ಇದನ್ನು ನೇಮಕ ಮಾಡಲಾಗುತ್ತದೆ. ಇದು ಆ ಇಲಾಖೆಯಲ್ಲಿರತಕ್ಕ ಟೆಕ್ನಿಕಲ್ ಅಧಿಕಾರಿಗಳೇ ಸೇರಿ ಆಗುತ್ತಾರೆ.

ಶ್ರೀ ಸಿ. ಆರ್. ರಂಗೇಗೌಡ.—ಅವರಿಗೆ ನಂಬಳಕೊಡದೇ ಹೋದರೆ ಅವರು ಜೀವನ ಹೇಗೆ ನಡೆಸಬೇಕು?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಕೇವಲ ಒಂದೇ ಒಂದು ಕೇಸಿನಲ್ಲಿ ಸ್ವಲ್ಪ ವ್ಯತ್ಯಾಸವಾಗಿ ಆ ರೀತಿ ಆಗಿತ್ತು. ಅದು ಹಂಗಾಮಿ ಹುದ್ದೆಯಾಗಿತ್ತು. ಆದ್ದರಿಂದ ಅಂಥ ಒಂದು ಪರಿಸ್ಥಿತಿಗೆ ಅವಕಾಶ ಉಂಟಾಗಿತ್ತು. ಈಗ ಅದನ್ನು ನಿವಾರಿಸಲಾಗಿದೆ

ಶ್ರೀ ಸಿ. ವಿ. ವೆಂಕಟರಾಯಪ್ಪ.—ಸೆಲೆಕ್ಷನ್ ಕಮಿಟಿಯವರು ಸೆಲೆಕ್ಟ್ ಮಾಡಿ ಕಳುಹಿಸಿದ್ದು ಆಫೀಸರೆಂತಲೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಟೆಕ್ನಿಕಲ್ ವಿಚಾರವಾದ್ದರಿಂದ ಅದೇ ಆಫೀಸರು.

ಶ್ರೀ ಎನ್. ಹುಚ್ಚೆಗಾಸ್ತಿಗೌಡ.—ಈ ಕಮಿಟಿಯಲ್ಲಿ ರೀಜನಲ್ ರೆಪ್ರೆಸೆಂಟೇಷನ್ ಇರುವಂತೆ ಮಾಡಲು ನಾನ್ ಅಫಿಷಿಯಲ್ ಮೆಂಬರ್‌ಗಳನ್ನು ಇದರಲ್ಲಿ ಹಾಕುವುದಕ್ಕಾಗುವುದಿಲ್ಲವೇ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಹೈಲಿ ಟೆಕ್ನಿಕಲ್ ವಿಚಾರವಾದ್ದರಿಂದ ಸಾಧ್ಯವಿಲ್ಲ.

ಶ್ರೀ ಕೆ. ಸಿ. ರೇವಣಸಿದ್ದಪ್ಪ.—ಪಾರಿಭಾಷಿಕ ವಿದ್ಯೆಯಲ್ಲಿ ಪರಿಣಿತರಾಗಿ ಬಲು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಕಳುಹಿಸಿದ ನಂತರ ಅವರು ತಮ್ಮ ವ್ಯಾಸಂಗವನ್ನು ಮುಗಿಸಿಕೊಂಡುಬಂದ ನಂತರ ಅವರನ್ನು ಅವರವರ ವಿದೆಗೆ ಸಂಬಂಧಪಟ್ಟ ಬಾಬುಗಳಿಗೆ ಅವರನ್ನು ಹಾಕಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತದೆಯೇ?

ಶ್ರೀ ಎಂ. ವಿ ಕೃಷ್ಣಪ್ಪ.—ಆ ಇಲಾಖೆಯಲ್ಲಿ ಸ್ಥಳವಿಲ್ಲದಿದ್ದಾಗ ಒಂದು ನಿದರ್ಭ ಬಿಟ್ಟರೆ ಇನ್ನುಳಿದ ನಿದರ್ಭದಲ್ಲೆಲ್ಲಾ ಆ ಇಲಾಖೆಗೇ ಅವರನ್ನು ಹಾಕಲಾಗುತ್ತದೆ.

Total Mileage of P. W. D. Roads in Nagamangala Taluk.

* *Q.*—1178. Sri T. N. MADAPPA GOWDA (Nagamangala).—

Will the Government be pleased to state :—

(*a*) the total mileage of P. W. D. roads in Nagamangala Taluk ;

(*b*) number of road rollers that have been provided to the P.W.D. Office, Nagamangala, and whether they are in working order ;

(*c*) whether they are aware that with the existing Road rollers in the said P. W. D. Division. it has not been possible to complete the work of all the roads in the taluk ;

(*d*) if so, the action they intend taking in this behalf ?

A.—Sri G. B. SHANKARA RAO (Parlimantry Sceretary to the Minister for Public Works)

(*a*) *Miles Furlongs.*
150 2

(*b*) Two road rollers and they are in working order.

(*c*) Yes.

(*d*) Orders have been placed for the purchase of road rollers.

ಶ್ರೀ ಟಿ. ಎನ್. ಮಾದಪ್ಪಗೌಡ.—ಪಿ. ಡಬ್ಲ್ಯು. ಡಿ. ರೋಡಿನ ಮೈಂಟೆನೆನ್ಸಿಗೆ ಈ ವರ್ಷ ಎಷ್ಟು ಹಣ ಖರ್ಚಾಗಿದೆ?

† Sri G. B. SHANKARA RAO.—The Government has spent about Rs. 750 per mile.